ದಿನಾಂಕಃ **25.04.2026**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ 13 ನೇ ಪ್ರತಿವಾದಿ ಪರ ಶ್ರೀ ಎಸ್.ಆರ್.ಆರ್. ವಕೀಲರಿಂದಃ

ನನ್ನ ತಂದೆ ಹನುಮಂತರೆಡ್ಡಿ ನಮ್ಮ ಗ್ರಾಮದಲ್ಲಿ ಎಲ್ಲರಿಗೂ ಪರಿಚಯವಿರುವಂತ ವ್ಯಕ್ತಿ ಎಂದರೆ ಸರಿ. ನನ್ನ ತಂದೆ ಹನುಮಂತರೆಡ್ಡಿಯವರನ್ನು ಸ್ವಾಮಿ ಎಂದು ಸಹ ಕರೆಯುತ್ತಾರೆ ಎಂದರೆ ಸರಿ. ನನ್ನ ತಂದೆ ತುಂಬಾ ಗೌರವಯುತ ವ್ಯಕ್ತಿ ಮತ್ತು ಅವರಿಗೆ ಯಾವುದೇ ದುರಭ್ಯಾಸಗಳು ಇರುವುದಿಲ್ಲ ಎಂದರೆ ಸರಿ. ನನ್ನ ಮದುವೆಯ ಪೂರ್ವದಲ್ಲಿ ನಮ್ಮ ಮನೆಯ ಯಜಮಾನಿಕೆ ಮತ್ತು ಮೇಲ್ವಿಚಾರಣೆಯನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ಮದುವೆ ನನ್ನ ತಂದೆಯೆ ಮಾಡಿರುತ್ತಾರೆ ಎಂದರೆ ಸರಿ.

2. ಇಂದಿಗೂ ನೀವು ಮತ್ತು ನಿಮ್ಮ ತಂದೆ ಹನುಮಂತರೆಡ್ಡಿ ಅನ್ಯೂನ್ಯವಾಗಿ ಇರುತ್ತೀರ ಎಂದು ಸೂಚಿಸಿದ್ದಕ್ಕೆ ಸಾಕ್ಷಿ 2019 ರವರೆಗೆ ನಾನು ಮತ್ತು ನನ್ನ ತಂದೆ ಅನ್ಯೂನ್ಯವಾಗಿ ಇದ್ದೇವು, 2019 ರಲ್ಲಿ ನನಗೆ ಕಷ್ಟ ಇದ್ದ ಕಾರಣ ನನ್ನ ತಂದೆಯನ್ನು ಸಹಾಯ ಕೇಳಿದಾಗ ಎಲ್ಲಾ ಆಸ್ತಿಗಳನ್ನು ಮಾರಾಟ ಮಾಡಿರುತ್ತೇವೆ ನಿನಗೆ ಮತ್ತು ನಮಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ಆದ್ದರಿಂದ ನಾನು ನನ್ನ ತಂದೆಯೊಂದಿಗೆ ವಿಶ್ವಾಸದಿಂದ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. 2019 ರವರೆಗೆ ನಾನು ನನ್ನ ತಂದೆ ಮನೆಗೆ ಹೋಗಿ ಬರುತ್ತಿದ್ದೇನು ಎಂದರೆ ಸರಿ. 2019 ರವರೆಗೆ ಪ್ರತಿ ವರ್ಷ ನನ್ನ ತಂದೆ ನನಗೆ ಅರಿಶಿಣ ಕುಂಕುಮ ಕೊಡುತ್ತಿದ್ದರು ಎಂದರೆ ಸರಿ. 2019 ರವರೆಗೆ ಕುಟುಂಬಂದ ಎಲ್ಲಾ ವ್ಯವಹಾರಗಳ ಬಗ್ಗೆ ನನಗೆ ತಿಳಿಸುತ್ತಿದ್ದರು ಎಂದು ಸೂಚಿಸುವುದು ಸರಿಯಲ್ಲ. ನನ್ನ ತಂದೆಗೆ ಯಾವುದೇ ದುರಭ್ಯಾಸ ಇಲ್ಲದ ಕಾರಣ ಅವರು ಮಾಡುವ ಎಲ್ಲಾ ವ್ಯವಹಾರಗಳು ಕುಟುಂಬದ

ಅನುಕೂಲಕ್ಕಾಗಿ ಮಾಡುತ್ತಿದ್ದರು ಎಂದರೆ ಸರಿ. 7 ಮತ್ತು 8 ನೇ ಪ್ರತಿವಾದಿಗಳು ನನ್ನ ಅಣ್ಣ ತಮ್ಮಂದಿರು ಎಂದರೆ ಸರಿ. ನಾನು 10 ನೇ ತರಗತಿವರೆಗೆ ವ್ಯಾಸಾಂಗ ಮಾಡಿರುತ್ತೇನೆ. 7 ನೇ ಪ್ರತಿವಾದಿ 8 ನೇ ತರಗತಿವರೆಗೆ ವ್ಯಾಸಾಂಗ ಮಾಡಿರುತ್ತಾನೆ. 8 ನೇ ಪ್ರತಿವಾದಿ 10 ನೇ ತರಗತಿವರೆಗೆ ವ್ಯಾಸಾಂಗ ಮಾಡಿರುತ್ತಾನೆ.

3. ನನ್ನ ತಂದೆ ಮತ್ತು ನನ್ನ ಅಣ್ಣ ತಮ್ಮಂದಿರು ವಿಶ್ವಾಸದಿಂದ ಇರುತ್ತಾರೆ ಎಂದರೆ ಸರಿ. 8 ನೇ ಪ್ರತಿವಾದಿ ವ್ಯಾಪಾರ ಮಾಡುತ್ತಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಸಾಮ್ರಾಟ್ ಕಂಪನಿಯಲ್ಲಿ ಕೆಲಸ ಮಾಡುತ್ತಿರುತ್ತಾರೆ ಎಂದು ಉತ್ತರಿಸುತ್ತಾರೆ. 8 ನೇ ಪ್ರತಿವಾದಿ ಮಾಡುತ್ತಿದ್ದಂತಹ ವ್ಯವಹಾರಕ್ಕೆ ನನ್ನ ತಂದೆ ಸಂಪೂರ್ಣ ಸಹಕಾರ ನೀಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ನನ್ನ ತಂದೆಯಾದ 5 ನೇ ಪ್ರತಿವಾದಿ ಮತ್ತು ತಮ್ಮ 7 ನೇ ಪ್ರತಿವಾದಿ ಇಬ್ಬರು ಒಟ್ಟಿಗೆ ಒಂದೇ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ.

4. 7 ನೇ ಪ್ರತಿವಾದಿ ವ್ಯವಹಾರ ಮಾಡುತ್ತಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ವ್ಯವಸಾಯ ಮತ್ತು ರೈಸ್ ಮಿಲ್ ನಡೆಸುತ್ತಿರುತ್ತಾರೆ ಎಂದು ಉತ್ತರಿಸುತ್ತಾರೆ. 7 ನೇ ಪ್ರತಿವಾದಿ ರೈಸ್ ಮಿಲ್ ಅನ್ನು ಪ್ರಾರಂಭಿಸಲು ನನ್ನ ತಂದೆಯಾದ 5 ನೇ ಪ್ರತಿವಾದಿ ಎಲ್ಲಾ ಸಹಾಯ ಮಾಡಿರುತ್ತಾರೆ ಎಂದರೆ ಸರಿ. ದಾವಾ 1 ರಿಂದ 11 ನೇ ಆಸ್ತಿಗಳನ್ನು ನಿಮ್ಮ ತಂದೆ ಖರೀದಿ ಮಾಡಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ನನ್ನ ತಂದೆಯ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ ಆದರೆ ನಾನು ಮತ್ತು ನನ್ನ ಅಣ್ಣ ತಮ್ಮಂದಿರು ಒಟ್ಟಿಗೆ ದುಡಿದು ಗಳಿಸಿದ ಹಣದಿಂದ ಖರೀದಿ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಎಲ್ಲಾ ದಾವಾ ಆಸ್ತಿಗಳನ್ನು ನನ್ನ ತಂದೆ 1985 ರ

ಪೂರ್ವದಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. 1985 ರ ಪೂರ್ವದಲ್ಲಿ ನಾನು ಮತ್ತು ನನ್ನ ಅಣ್ಣ ತಮ್ಮಂದಿರು ಅಪ್ರಾಪ್ತ ವಯಸ್ಕರು ಆಗಿದ್ದೇವು ಎಂದರೆ ಸರಿ.

5. ನಾನು 4 ಅಥವಾ 5 ನೇ ತರಗತಿ ವ್ಯಾಸಾಂಗ ಮಾಡುತ್ತಿದ್ದ ಸಮಯದಿಂದ ನನ್ನ ತಂದೆ ಏನು ಕೆಲಸ ಮಾಡುತ್ತಿದ್ದರು ಎಂದು ನನಗೆ ನೆನಪಿರುತ್ತದೆ. ನಿಮ್ಮ ತಂದೆ ಐ.ಡಿ. ಹಳ್ಳಿ ಗ್ರಾಮದಲ್ಲಿ ದಿನಸಿ ಅಂಗಡಿ ನಡೆಸುತ್ತಿದ್ದರು ಎಂದರೆ ಸರಿ. ನನ್ನ ತಂದೆ ಅಂಗಡಿ ನಡೆಸುತ್ತಿದ್ದಾಗ ಮತ್ತು ಅಂಗಡಿ ಮುಚ್ಚಿದ ನಂತರವು ಸಹ ಬಸ್ಸಿನ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆ ನಡೆಸುತ್ತಿದ್ದ ಅಂಗಡಿ ಮತ್ತು ಬಸ್ಸಿನ ಏಜೆಂಟ್ ಕೆಲಸದಿಂದ ಬಂದ ಆದಾಯದಿಂದ ದಾವಾ ಸ್ವತ್ತುಗಳನ್ನು ನನ್ನ ತಂದೆ ಖರೀದಿ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

6. ದಾವಾ ಸ್ವತ್ತುಗಳನ್ನು ಖರೀದಿ ಮಾಡಲು ಯಾವ ಆದಾಯ ಇತ್ತು ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿ ನನ್ನ ತಾತನಿಗೆ ಸೇರಿದ ಸರ್ವೆ.ನಂಬರ್.6/4 ರಲ್ಲಿನ 2 ಎಕರೆ 36 ಗುಂಟೆ ಮತ್ತು ಸರ್ವೆ.ನಂಬರ್.122/3 ಎರಲ್ಲಿನ 3 ಎಕರೆ 30 ಗುಂಟೆ ಜಮೀನಿನಲ್ಲಿ ನಾವು ಎಲ್ಲರೂ ಮಾಡುತ್ತಿದ್ದ ವ್ಯವಸಾಯದಿಂದ ಬಂದ ಆದಾಯದಿಂದ, ಹುಣಸೆ ಹಣ್ಣನ್ನು ಮಾರಾಟ ಮಾಡಿದಾಗ ಬಂದ ಆದಾಯದಿಂದ ಮತ್ತು 10 ಹಸುಗಳನ್ನು ಸಾಕಿ ಅವುಗಳಿಂದ ಬಂದ ಆದಾಯದಿಂದ ಖರೀದಿ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ನಾವು 10 ಹಸುಗಳನ್ನು ಇಟ್ಟುಕೊಂಡು ಹಾಲು ಮಾರಾಟ ಮಾಡಿರುವುದಕ್ಕೆ ಮತ್ತು ಹುಣಸೆ ಹಣ್ಣನ್ನು ಮಾರಾಟ ಮಾಡಿರುವುದಕ್ಕೆ ಯಾವುದೇ ದಾಖಲೆ ಇರುವುದಿಲ್ಲ. ಸರ್ವೆ.ನಂಬರ್.6/4 ರಲ್ಲಿನ 2 ಎಕರೆ 36 ಗುಂಟೆ ಮತ್ತು ಸರ್ವೆ.ನಂಬರ್.122/3 ಎರಲ್ಲಿನ 3 ಎಕರೆ 30 ಗುಂಟೆ ಜಮೀನುಗಳು ನಮ್ಮ ತಾತನಿಗೆ ಸೇರಿರುತ್ತವೆ ಎಂಬುದಕ್ಕೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

7. 1995 ರಿಂದ 2006 ರವರಗೆ ಸರಿಯಾಗಿ ಮಳೆ ಆಗಿರುವುದಿಲ್ಲ ಎಂದರೆ ಸರಿ. 1995 ರಿಂದ 2006 ರವರೆಗೆ ಮಳೆ ಸರಿಯಾಗಿ ಆಗದ ಕಾರಣ ನನ್ನ ತಂದೆಗೆ ಕುಟುಂಬದ ನಿರ್ವಹಣೆ ಮಾಡಲು ಕಷ್ಟಕರವಾಗಿತ್ತು ಎಂದು ಸೂಚಿಸುವುದು ಸರಿಯಲ್ಲ. 1995 ರಿಂದ 2006 ರವೆಗೆ ಮಳೆ ಸರಿಯಾಗಿ ಆಗದ ಕಾರಣ ನಿಮ್ಮ ತಂದೆಗೆ ವ್ಯವಸಾಯದಿಂದ ಯಾವುದೇ ಆದಾಯ ಇರಲಿಲ್ಲ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ನಾವು ಬೋರ್ ವೆಲ್ ಹಾಕಿಸಿದ್ದೇವು ನೀರು ಬರುತ್ತಿತ್ತು ಎಂದು ಉತ್ತರಿಸುತ್ತಾರೆ.

8. ದಾವಾ 6 ನೇ ಸ್ವತ್ತನ್ನು ದಿ:18.08.1999 ರಂದು ನಿಮ್ಮ ತಂದೆ ಕುಟುಂಬದ ಅವಶ್ಯಕತೆಗಾಗಿ 4 ನೇ ಪ್ರತಿವಾದಿ ಗುರುದರ್ ಸಿಂಗ್ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ಮಾರಾಟ ಮಾಡಿರುತ್ತಾರೆ ಆದರೆ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. 4 ನೇ ಪ್ರತಿವಾದಿ ಸದರಿ ಸ್ವತ್ತನ್ನು ದಿ:28.01.2011 ರಂದು 10 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 10 ನೇ ಪ್ರತಿವಾದಿ ದಾವಾ 6 ನೇ ಸ್ವತ್ತನ್ನು ದಿ:13.03.2012 ರಂದು 11 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ದಿ:06.07.2013 ರಂದು ದಾವಾ 6 ನೇ ಸ್ವತ್ತನ್ನು 11 ನೇ ಪ್ರತಿವಾದಿ 12 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 12 ನೇ ಪ್ರತಿವಾದಿ ದಾವಾ 6 ನೇ ಸ್ವತ್ತನ್ನು ದಿ:04.09.2017 ರಂದು 13 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

9. ದಿ:18.08.1999 ರಿಂದ ದಾವಾ 6 ನೇ ಸ್ವತ್ತಿನಲ್ಲಿ 4 ನೇ ಪ್ರತಿವಾದಿ ಸ್ವಾಧೀನ ಇದ್ದರು ಎಂದು ಸೂಚಿಸಿದ್ದಕ್ಕೆ ಸಾಕ್ಷಿ 1997 ರಲ್ಲಿ ನನಗೆ ಮದುವೆಯಾಗಿ ಗಂಡನ ಮನೆಗೆ

ಹೋಗಿರುತ್ತೇನೆ ನಂತರ ಸದರಿ ಸ್ವತ್ತಿನಲ್ಲಿ ಯಾರು ಸ್ವಾಧೀನದಲ್ಲಿ ಇದ್ದರು ಎಂದು ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ಮದುವೆಯಾದ ನಂತರ ದಾವಾ ಸ್ವತ್ತುಗಳನ್ನು ಯಾರು ಸಾಗುವಳಿ ಮಾಡುತ್ತಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ದಿಃ18.08.1999 ರಂದು ದಾವಾ 6 ನೇ ಸ್ವತ್ತನ್ನು ನನ್ನ ತಂದೆ ಮಾರಾಟ ಮಾಡಿರುವುದರಿಂದ ಸದರಿ ಆಸ್ತಿಯಲ್ಲಿ ನನಗೆ ಯಾವುದೇ ಪಾಲು ಅಥವಾ ಹಕ್ಕು ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. 2017 ರಿಂದ ದಾವಾ 6 ನೇ ಸ್ವತ್ತು 13 ನೇ ಪ್ರತಿವಾದಿಯ ಸ್ವಾಧೀನದಲ್ಲಿ ಇರುತ್ತದೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ.

10. ದಿಃ18.08.1999 ರಂದು ನನ್ನ ತಂದೆ ದಾವಾ 6 ನೇ ಸ್ವತ್ತನ್ನು ಮಾರಾಟ ಮಾಡಿದ ಬಗ್ಗೆ 1999 ರಿಂದಲೂ ನನಗೆ ಮಾಹಿತಿ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. 1999 ರಿಂದ ದಾವಾ 6 ನೇ ಸ್ವತ್ತಿಗೆ ಸಂಬಂಧಿಸಿದಂತೆ ಆದಂತಹ ಕ್ರಯಪತ್ರಗಳ ಆಧಾರದ ಮೇರೆಗೆ ಸದರಿ ಸ್ವತ್ತಿನ ಖಾತೆ ವರ್ಗಾವಣೆಯಾಗಿರುತ್ತದೆ ಮತ್ತು ಅದರ ಬಗ್ಗೆ ನಿಮಗೆ ಮಾಹಿತಿ ಇರುತ್ತದೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ಅದರ ಬಗ್ಗೆ ಇಂದಿಗೂ ನಮಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ದಾವಾ 6 ನೇ ಸ್ವತ್ತನ್ನು ನನ್ನ ತಂದೆ ಕುಟುಂಬದ ಅವ್ವಶ್ಯಕತೆಗೆ ಮಾರಾಟ ಮಾಡಿ ಬಂದ ಹಣವನ್ನು ಕುಟುಂಬದ ಅವಶ್ಯಕತೆಗೆ ಉಪಯೋಗಿಸಿಕೊಂಡಿರುವುದರಿಂದ ದಿಃ18.08.1999 ರ ಕ್ರಯಪತ್ರ ನನಗೂ ಸಹ ಬದ್ಧ ಪಡಿಸುತ್ತದೆ ಎಂದು ಸೂಚಿಸುವುದು ಸರಿಯಲ್ಲ.

11. ದಾವಾ 6 ನೇ ಸ್ವತ್ತನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ